Publication : Vijayavani
Date: June 20, 2014
Page No: 4
Edition: All

SARA Media Net
Simply communicate...

# ಕಮರ್ಷಿಯಲ್ ಹೋಮ್ ಟೌನ್

## ಅಪೂರ್ವ ಉತ್ತರ

ಕವೀ

'ಏನಾದರೂ ಕೇಳಿದರೆ, ಹೇಳೋದು ಸುಲಭ' ಎಂಬಂತೆ ಅವರು ತಡೆತಡೆದು ಮಾತಾಡುತ್ತಿದ್ದರು. ಮಧ್ಯೆ ಮಧ್ಯೆ ತಡೆಯಿಲ್ಲದೇ ನಗುತ್ತಿದ್ದರು. ಬಹಳಷ್ಟನ್ನು ಸಾಧಿಸಿದ ಬಳಿಕ ಹೊಸದೊಂದು ಪ್ರಯೋಗಕ್ಕೆ ಕೈಹಾಕಲು ಹೊರಟವರ ಬಿಡುಬೀಸು ದೇಹಭಾಷೆ. ತಾರಾ ಹೋಟೆಲ್‌ನ ಸಭಾಂಗಣ ಆದಾಗಿದ್ದರಿಂದಲೋ ಏನೋ, ಅವರಾಡುವ ಪ್ರತಿ ಮಾತಿನಲ್ಲೂ ಇಂಗ್ಲಿಷ್ ಪದಗಳು ನುಗ್ಗಿ ಬರುತ್ತಿದ್ದವು. ಅಷ್ಟಿಷ್ಟು ಕನ್ನಡ... ಕೇಳಿದ್ದಕ್ಕಷ್ಟೇ ಉತ್ತರ. ಅದಕ್ಕೂ ಮೀರಿ?

ನಿರುತ್ತರ!

ಚೊಚ್ಚಲ ನಿರ್ದೇಶನದ ಚಿತ್ರ 'ನಿರುತ್ತರ'ದ ಮಾಧ್ಯಮಗೋಷ್ಠಿಯಲ್ಲಿ ಅಪೂರ್ವ ಕಾಸರವಳ್ಳಿ ಕುರಿತ ವಿವರಗಳಿವು. ನಿಮಗೀಗಾಗಲೇ ಗೊತ್ತು, ಅವರು ಖ್ಯಾತ ನಿರ್ದೇಶಕ ಗಿರೀಶ್ ಕಾಸರವಳ್ಳಿ ಪುತ್ರ. ಅಪ್ಪನ ಸಿನಿಕಲಿಕೆಯಾಗಿದ್ದು ಪುಣೆಯಲ್ಲಾದರೆ, ಮಗನದ್ದು ಆಸ್ಟ್ರೇಲಿಯದ ಸಿಡ್ನಿಯಲ್ಲಿ! ಹೀಗಾಗಿ ಇಬ್ಬರ 'ಭಾಷೆ' ಭಿನ್ನ, ಯೋಚಿಸುವ ಧಾಟಿಯೂ ಭಿನ್ನ. ಗಿರೀಶರದು ಕಲಾತ್ಮಕ ನೆಲೆ. ಅಪೂರ್ವ ಕಮರ್ಷಿಯಲ್ ಪ್ರೀತಿಯುಳ್ಳವರು. ಕಮರ್ಷಿಯಲ್ ಎಂದಾಕ್ಷಣ, ಚಿತ್ರಕ್ಕೆ 'ನಿರುತ್ತರ' ಎಂಬುದಕ್ಕೆ ಬದಲಾಗಿ 'ಚಿಟ್ಟೆ ಬೇಡ ಗುರು' ಎಂದೆಲ್ಲಾ ಹೆಸರಿಟ್ಟು ಹಾಸ್ಯಾಸ್ಪದಕ್ಕೀಡಾಗಲು ಅವರು ಸಿದ್ಧರಿಲ್ಲ. 'ಹಿಂದೆ ನಮ್ಮಲ್ಲಿ ಬಹಳ ಅರ್ಥಪೂರ್ಣ ಕಮರ್ಷಿಯಲ್ ಚಿತ್ರಗಳು ಬಂದವು. ಪುಟ್ಟಣ್ಣ ಕಣಗಾಲ್, ಸಿದ್ದಲಿಂಗಯ್ಯ ಈ ಮಾದರಿ ಹುಟ್ಟುಹಾಕಿ ಭಾರತೀಯ ಚಿತ್ರರಂಗವೇ ನಮ್ಮತ್ತ ತಿರುಗುವಂತೆ ಮಾಡಿದ್ದರು. ಈಗ ಅರ್ಥಪೂರ್ಣ ಕಮರ್ಷಿಯಲ್ ಚಿತ್ರಗಳಿಗಾಗಿ ನಾವು ಪರಭಾಷೆಗಳತ್ತ ಕಣ್ಬಿಟ್ಟು ನೋಡುತ್ತಿದ್ದೇವೆ'- ಗಿರೀಶರ ಈ ಹೇಳಿಕೆಯನ್ನು ಸುಳ್ಳಾಗಿಸುವ ನಿಟ್ಟಿನಲ್ಲಿ ಅಪೂರ್ವ ಹೆಜ್ಜೆ ಇಟ್ಟಿರುವಂತಿದೆ.

ಪ್ರದೀಪ್, ಹಂಸ, ಅಚಿಂತ್ ಮತ್ತು ಶ್ರಾವ್ಯ- ಈ ನಾಲ್ವರು ಮಹಾನಗರವಾಸಿಗಳ ಮಧ್ಯೆ ನಡೆಯುವ ಕಥೆ 'ನಿರುತ್ತರ'ದ್ದು. ಕಥೆಗಾರ ವಿಕ್ರಮ್ ಹತ್ವಾರ್ ಇದರ ಕರ್ತೃ. ಹಂಸ ಪಾತ್ರಧಾರಿ ಭಾವನಾ. 'ಭಾಗೀರತಿ' ಬಳಿಕ ಬಣ್ಣಹಚ್ಚುತ್ತಿರುವ ಅವರಿಲ್ಲಿ ಹಿಂದೂಸ್ತಾನಿ ಗಾಯಕಿ. ಅಚಿಂತ್ ಆಗಿ 'ಹಾಗೇ ಸುಮ್ಮನೆ' ಹೀರೋ ಕಿರಣ್ ಶ್ರೀನಿವಾಸ್. ಶ್ರಾವ್ಯಾ ರೂಪದಲ್ಲಿ ಐಂದ್ರಿತಾ ರೇ. ಪ್ರದೀಪನಾಗಿ ಯಾರು? ಈ ಪ್ರಶ್ನೆಗೆ ಅಪೂರ್ವ ಅವರದು ಸದ್ಯಕ್ಕೆ ನಿರುತ್ತರ. ಬಾಲಿವುಡ್ ನಟ ರಾಹುಲ್ ಬೋಸ್ ಜೊತೆ ಈ ಪಾತ್ರಕ್ಕಾಗಿ ಮಾತುಕತೆ ಜಾರಿಯಲ್ಲಿದ್ದು, ಆಯ್ಕೆ ಬಗ್ಗೆ ಈಗಲೇ ಅಧಿಕೃತವಾಗಿ ಹೇಳಲಾಗದು.



ಅಪೂರ್ವ



ಅರವಿಂದ್

ಬಿಗಡಾಯಿಸುತ್ತಿರುವ ಮಾನವೀಯ ಸಂಬಂಧಗಳಲ್ಲಿ ಬದುಕನ್ನು ಪುನರ್‌ವಿಮರ್ಶೆಗೆ ಒಳಪಡಿಸುವುದು ಕಥೆಯ ಹೂರಣವಂತೆ. ಆ್ಯಕ್ಷನ್ ಹೊರತುಪಡಿಸಿ, ಕಮರ್ಷಿಯಲ್ ಕೋನದಲ್ಲಿ ಏನೇನು ಇರಬೇಕೋ ಅದೆಲ್ಲವೂ ಇಲ್ಲಿರುತ್ತೆ- ಎನ್ನುತ್ತಾರೆ ಅಪೂರ್ವ.

ದೇಶಾದ್ಯಂತ ಸಂಗೀತ, ನೃತ್ಯ ಕಾರ್ಯಕ್ರಮಗಳನ್ನು ಆಯೋಜಿಸುತ್ತ ಅನುಭವ ಪಡೆದಿರುವ ಅರವಿಂದ್ ರಾಮಣ್ಣ 'ನಿರುತ್ತರ' ನಿರ್ಮಾಪಕ. ಇವರು ಭಾವನಾ ಅವರ ಖಾಸಾ ಸಹೋದರ. ಹೋಮ್ ಟೌನ್ ಪ್ರೊಡಕ್ಷನ್ಸ್ ಮೂಲಕ ಅವರಿಗಿದು ಹೊಸ ಆರಂಭ. 50 ದಿನಗಳ ಷೆಡ್ಯೂಲ್‌ನಲ್ಲಿ ಶೂಟಿಂಗ್ ಮುಗಿಸುವುದು ಅವರ ಗುರಿ. ಬೆಂಗಳೂರಿನಲ್ಲಿ ಹೆಚ್ಚಿನ ದೃಶ್ಯಗಳನ್ನು ಸೆರೆಹಿಡಿಯುವ ಉದ್ದೇಶವಿದ್ದು, ನಿರ್ದೇಶಕರ ಅಣತಿಯಂತೆ ಹಿಮಾಚಲ ಪ್ರದೇಶ, ರಾಜಸ್ಥಾನ, ಗೋವಾಗೂ ಹೋಗಲು ನಿರ್ಧರಿಸಲಾಗಿದೆ. ಬಜೆಟ್ ಬಗ್ಗೆ ಜಾಸ್ತಿ ಚಿಂತಿಸದೇ ಇರುವ ಪರಿಮಿತಿಯಲ್ಲೇ ಒಂದೊಳ್ಳೆಯ ಚಿತ್ರ ಕೊಡುವುದು ಅರವಿಂದ್ ಆಸೆ. ಕೋಲ್ಕತಾದ ನೀಲಾದ್ರಿ ಕುಮಾರ್ ಈ ಚಿತ್ರದ ಮೂಲಕ ಸಂಗೀತ ನಿರ್ದೇಶಕರಾಗಿ ಗಾಂಧಿನಗರಕ್ಕೆ ಎಂಟ್ರಿ ಕೊಡುತ್ತಿದ್ದು, 7 ಹಾಡುಗಳಿಗೆ ರಾಗ ಹಾಕಲಿದ್ದಾರೆ. ಐಟಂ ಹಾಡಿಗೆ ಜಾಗವಿಲ್ಲ... ಆದರೆ ಪ್ರತಿ ಹಾಡಿನಲ್ಲೂ ಐಟಮ್‌ನಂತೆ ಆಕರ್ಷಣೆ- ಮಾಧುರ್ಯ- ಪ್ರಯೋಗಶೀಲತೆ ತುಂಬುವುದು ನೀಲಾದ್ರಿ ದೃಷ್ಟಿಕೋನ. 'ತಾಯಿಸಾಹೇಬ', 'ದ್ವೀಪ', 'ನೆನಪಿರಲಿ' ಚಿತ್ರಗಳನ್ನು ಸೆರೆಹಿಡಿದ ಎಚ್.ಎಂ. ರಾಮಚಂದ್ರ ಇಲ್ಲಿ ಛಾಯಾಗ್ರಾಹಕ. ಭಿನ್ನ ಬಣ್ಣಗಳ ಸಂಯೋಜನೆಯಲ್ಲಿ ಕಥೆಯನ್ನು ಪ್ರಸ್ತುಪಡಿಸುವತ್ತ ಅವರ ಆಸ್ಥೆ.

**ಲಾಸ್ಟ್‌ಪಂಚ್**: 'ಹಾಗೇ ಸುಮ್ಮನೆ' ಮುಂಬೈನಲ್ಲಿ ನೆಲೆಯೂರಿರುವ ಕಿರಣ್ ಶ್ರೀನಿವಾಸ್ ಗಾಂಧಿನಗರದಲ್ಲಿ ಪುನಃ 'ನಿರುತ್ತರ'ರಾಗಿಯೇ ಉತ್ತರ ಕಂಡುಕೊಳ್ಳಲು ಬಂದಿದ್ದಾರೆ. 2ನೇ ಇನ್ನಿಂಗ್ಸ್‌ನಲ್ಲಾದರೂ ಕ್ಲಿಕ್ ಆಗುವ ಅಪೂರ್ವ ಅವಕಾಶದಲ್ಲಿ ಅದೃಷ್ಟ ಅವರ ಕೈಹಿಡಿಯುತ್ತಾ?!



ಕಿರಣ್, ಭಾವನಾ

# 70, Samruddhi, 1st Main, 2nd Block, Ayyappanagar, K. R. Puram, Bangalore – 560 036
Telefax : 080 25619525 Mobile : 094482 21565, 094489 02288
E-mail : saramedianet@gmail.com, amrithjogi@gmail.com
**www.saramedianet.com**